ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಚೇರಿ : ಬೆಂಗಳೂರು

ಪತ್ರಿಕಾ ಸ್ಪಷ್ಟೀಕರಣ

ಕರ್ನಾಟಕ ರಾಜ್ಯದ ರಸ್ತೆ ಸಾರಿಗೆಯ ನಾಲ್ಕೂ ನಿಗಮಗಳ ಎಲ್ಲಾ ಅಧಿಕಾರಿಗಳು ಹಾಗೂ ನೌಕರರುಗಳ ಒಂದು ದಿನದ ವೇತನದ ಒಟ್ಟು ಮೊತ್ತವಾದ ರೂ.9.03 ಕೋಟಿಗಳನ್ನು 2018ರ ಡಿಸೆಂಬರ್ ತಿಂಗಳಿನಲ್ಲಿಯೇ ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ದೇಣಿಗೆಯಾಗಿ ನೀಡಲು ನಿರ್ಧರಿಸಲಾಗಿತ್ತು. ಆದರೆ ಮೂರು ನಿಗಮಗಳು ಮೊತ್ತವನ್ನು ನೀಡಿದ್ದು, ಒಂದು ನಿಗಮದಿಂದ ಮಾತ್ರ ಮೊತ್ತ ಬರಲು ತಡವಾಗಿದ್ದರಿಂದ, ಸದರಿ ಮೊತ್ತವನ್ನು ಬೆಂಗಳೂರಿನಲ್ಲಿಯೇ ನೀಡಲು ನಿರ್ಧರಿಸಲಾಯಿತು.

ಮುಂದುವರೆದು, ಸದರಿ ಪರಿಹಾರದ ಮೊತ್ತವನ್ನು ಮಾರ್ಚ್ 7, 2019 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಯವರ ಗಣ್ಯ ಉಪಸ್ಥಿತಿಯಲ್ಲಿ, ಸಂಸ್ಥೆಯಲ್ಲಿ ನೂತನವಾಗಿ ನೇಮಕಗೊಂಡ ಸಿಬ್ಬಂದಿಗಳ ಸೇರ್ಪಡೆ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಚೆಕ್ ಮೂಲಕ ನೀಡಲು ನಿರ್ಧರಿಸಲಾಗಿತ್ತು. ಆದರೆ, ಸದರಿ ಸಮಾರಂಭವು ಮಾನ್ಯ ಮುಖ್ಯಮಂತ್ರಿಯವರ ಕಛೇರಿಯಿಂದ ರದ್ದಾದ ಕಾರಣ, ಆ ದಿನದಂದು ಮೊತ್ತವನ್ನು ನೀಡಲು ಸಾಧ್ಯವಾಗಿರುವುದಿಲ್ಲ.

ತದನಂತರದಲ್ಲಿ 2019ರ ಮಾರ್ಚ್ 11 ರಂದು ಲೋಕಸಭಾ ಚುನಾವಣೆಯ ಮಾದರಿ ನೀತಿಸಂಹಿತೆ ಜಾರಿಗೆ ಬಂದ ಕಾರಣ, ಪರಿಹಾರದ ಮೊತ್ತವನ್ನು ನೀಡಲು ಸಾಧ್ಯವಾಗಿರುವುದಿಲ್ಲ. ಪರಿಹಾರದ ಮೊತ್ತವನ್ನು ಬಡ್ಡಿ ಸಹಿತ ನೀಡಲಾಗುವುದು. ಸದರಿ ಪರಿಹಾರದ ಮೊತ್ತವನ್ನು ನೀಡಲು ಸಮಯ ನೀಡುವಂತೆ ಸನ್ಮಾನ್ಯ ಮುಖ್ಯಮಂತ್ರಿಗಳ ಕಛೇರಿಯನ್ನು ಕೋರಲಾಗಿದೆ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು,
ಕರಾರಸಾ.ನಿಗಮ